6

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಂ. 132. ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು – 560 027

## ಸೌಹಾರ್ದ ಪತ್ತಿನ ಸಹಕಾರಿಗಳು ಶಾಖೆ ತೆರೆಯುವಾಗ ಅನುಸರಿಸಬೇಕಾದ ಮಾನದಂಡಗಳು

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ಯಾವುದೇ ಸೌಹಾರ್ದ ಸಹಕಾರಿಯು ತನ್ನ ಶಾಖೆಗಳನ್ನು ತೆರೆಯುವಾಗ ಅನುಸರಿಸಬೇಕಾದ ಕ್ರಮದ ಬಗ್ಗೆ ಯಾವುದೇ ಸ್ಪಷ್ಟ ಪ್ರಾವಧಾನವಿರುವುದಿಲ್ಲ. ಸೌಹಾರ್ದ ಸಹಕಾರಿಗಳಿಗಾಗಿ ಸಂಯುಕ್ತ ಸಹಕಾರಿ ತಯಾರಿಸಿದ ಮಾದರಿ ಉಪವಿಧಿಯೂ ಸೇರಿದಂತೆ ಎಲ್ಲಾ ಸಹಕಾರಿಗಳ ಉಪವಿಧಿಗಳಲ್ಲಿ ಶಾಖೆಗಳನ್ನು ತೆರೆಯುವಾಗ ಸಾಮಾನ್ಯ ಸಭೆಯ ಅನುಮೋದನೆ ಅಗತ್ಯವೆಂದು ಹೇಳಲಾಗಿದೆ. ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸುವಾಗ ಶಾಖೆ ತೆರೆಯುವ ಬಗ್ಗೆ ಸ್ಪಷ್ಟವಾಗಿ ಮಾನದಂಡಗಳ ಅಗತ್ಯವಿರುವುದನ್ನು ಗಮನಿಸಿದ ದಿನಾಂಕ 10 ನವೆಂಬರ್ 2005ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ಈ ಕುರಿತು ವಿವರವಾಗಿ ಚರ್ಚಿಸಿ, ಕ.ಸೌಸ. ಅಧಿನಿಯಮ, 1997ರ ಕಲಂ 53 (7) (ಎಚ್) ಅಡಿ ಸದಸ್ಯ ಸಹಕಾರಿಗಳ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿಯು ಹೊಂದಿರುವ ಹಿನ್ನೆಲೆಯಲ್ಲಿ ಸದಸ್ಯ ಸಹಕಾರಿಗಳು ಶಾಖೆ ತೆರೆಯಲು ಸೂಕ್ತ ಮಾನದಂಡಗಳನ್ನು ರೂಪಿಸುವ ಅಗತ್ಯವನ್ನು ಮನಗಂಡು ಶಾಖೆ ತೆರೆಯುವಾಗ ಅನುಸರಿಸಬೇಕಾದ ಮಾನದಂಡಗಳ ಕರಡನ್ನು ಅಂತಿಮಗೊಳಿಸಿತು. ಇದನ್ನು ಸಂಯುಕ್ತ ಸಹಕಾರಿಯ ಮುಖಪತ್ರಿಕೆ ಸ್ವಾಭಿಮಾನಿ ಸಹಕಾರಿಯ ಜನವರಿ 2005ರ ಸಂಚಿಕೆಯಲ್ಲಿ ಪ್ರಕಟಿಸಿ ಸದಸ್ಯ ಸಹಕಾರಿಗಳ ಅಭಿಪ್ರಾಯವನ್ನು ಸಹ ಆಹ್ವಾನಿಸಲಾಗಿತ್ತು. ನಂತರ ದಿನಾಂಕ 24ನೇ ಜನವರಿ 2006 ರಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಇದನ್ನು ಅಂತಿಮಗೊಳಿಸಿತು. ಹೀಗೆ ಅಂತಿಮಗೊಳಿಸದ ಮಾನದಂಡಗಳನ್ನು ಈ ಮೂಲಕ ನೀಡಲಾಗುತ್ತಿದೆ.

# ಸೌಹಾರ್ದ ಪತ್ತಿನ ಸಹಕಾರಿಗಳು ಶಾಖೆ ತೆರೆಯುವಾಗ ಅನುಸರಿಸಬೇಕಾದ ಮಾನದಂಡಗಳು

**ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಹಾಗೂ (ಎಚ್) ಅಡಿ**

**ಸಂಖ್ಯೆ : ಸುತ್ತೋಲೆ 15/2005–06 ದಿನಾಂಕ : 25 ಮಾರ್ಚ್ 2006**

1. ಹೊಸ ಶಾಖೆಯನ್ನು ತೆರೆಯ ಬಯಸುವ ಪತ್ತಿನ ಸಹಕಾರಿಗಳು ಕಳೆದ ಎಲ್ಲಾ ರೀತಿಯ ಶಾಸನಬದ್ಧ ವಿಲೇವಾರಿಗಳನ್ನು ಮತ್ತು ಕೊಡಬೇಕಾದ ಬಡ್ಡಿಗೆ ಪ್ರಾವಧಾನ ಮಾಡಿದ ನಂತರವೂ ನಿರಂತರ ಮೂರು ವರ್ಷ ಲಾಭ ಗಳಸಿರತಕ್ಕದ್ದು.
2. ಓವರ್ ಡ್ಯೂ ಪ್ರಮಾಣವೂ ಸಾಲ ಮತ್ತು ಮುಂಗಡಗಳ ಶೇ. 15ನ್ನು ಮೀರಿರಬಾರದು ಅಥವಾ ಸ್ವಂತ ಬಂಡವಾಳದ ಶೇ.50ನ್ನು ಮೀರಿರಬಾರದು.
3. ಆರಂಭವಾದ ಹೊಸ ಶಾಖೆಯ ಖರ್ಚು ವೆಚ್ಚಗಳನ್ನು ಪ್ರಸ್ತುತ ಇರುವ ಶಾಖೆಯ ಮುಂದಿನ ಮೂರು ವರ್ಷ ಭರಿಸಲು ಸಕ್ಷಮವಾಗಿರಬೇಕು. ಹಾಗೆ ಖರ್ಚು ವೆಚ್ಚಗಳನ್ನು ಭರಿಸಿದ ನಂತರ ಹಾಗೂ ಎಲ್ಲಾ ರೀತಿಯ ಶಾಸನಬದ್ಧ ವಿಲೇವಾರಿಗಳನ್ನು ಮತ್ತು ಕೊಡಬೇಕಾದ ಬಡ್ಡಿಗೆ ಪ್ರಾವಧಾನ ಮಾಡಿದ ನಂತರವೂ ಲಾಭ ಗಳಿಸುವಂತಿರಬೇಕು.
4. ಮೇಲಿನ ಅರ್ಹತೆಗಳನ್ನು ಹೊಂದಿದ ಸಹಕಾರಿಗಳು ಮಾತ್ರ ತಮ್ಮ ಸಾಮಾನ್ಯ ಸಭೆಯಲ್ಲಿ ಹೊಸ ಶಾಖೆಯ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಸಾಮಾನ್ಯ ಸಭೆಯ ಎದುರು ಹೊಸ ಶಾಖೆಯ ಆರಂಭದ ಕಾರ್ಯ ಸಾಧ್ಯತಾ ವರದಿಯನ್ನು ಮಂಡಿಸಿ ಸಾಮಾನ್ಯ ಸಭೆಯ ಅನುಮೋದನೆ ಪಡೆಯತಕ್ಕದ್ದು. ಅಂತಹ ಕಾರ್ಯ ಸಾಧ್ಯತಾ ವರದಿಯನ್ನು ಸಾಮಾನ್ಯ ಸಭೆಗೆ ಮುಂಚಿತವಾಗಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.
5. ಹೊಸ ಶಾಖೆ ಆರಂಭವಾದ 15 ದಿನಗಳಲ್ಲಿ ಸಂಯುಕ್ತ ಸಹಕಾರಿಗೆ ವರದಿಯನ್ನು ಸಲ್ಲಿಸತಕ್ಕದ್ದು.
6. ಮೇಲಿನ 1, 2 ಹಾಗೂ 3ರಲ್ಲಿ ಅರ್ಹತೆಗಳನ್ನು ಹೊಂದದೇ ಯಾವುದೇ ಸಹಕಾರಿಯು ಶಾಖೆಯನ್ನು ಆರಂಭಿಸಿದಲ್ಲಿ ಹಾಗೆ ನಿರ್ಣಯ ಕೈಗೊಂಡ ಮಂಡಳಿಯ ಮೇಲೆ ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 38 (1) (ಎ) ರಡಿ ಕ್ರಮ ಜರುಗಿಸುತ್ತದೆ ಅಲ್ಲದೇ ಅಂತಹ ಶಾಖೆಯನ್ನು ರದ್ದುಗೊಳಿಸುವಂತೆ ಸಹಕಾರಿಗೆ ನಿರ್ದೇಶನ ನೀಡುತ್ತದೆ.

ಈ ಮಾನದಂಡಗಳನ್ನು ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ, 25 ಮಾರ್ಚ್ 2006 ನೀಡಲಾಗಿದೆ.

ಸಹಿ /–

**(ಅನೂಪ ದೇಶಪಾಂಡೆ)**

ವ್ಯವಸ್ಥಾಪಕ ನಿರ್ದೇಶಕ